## ಕನ್ನಡದಲ್ಲಿ ಮಹಾಕಾವ್ಯ

ಎಂಬತ್ತರ ದಶಕದಲ್ಲಿ ಭಾರತೀಯರಿಗೆ ರಾಮಾಯಣ–ಮಹಾಭಾರತವನ್ನು ವಿಸ್ತೃತವಾಗಿ ಪರಿಚಯಿಸಿದ ಹಿಂದಿ ಧಾರಾವಾಹಿಗಳು ಇತ್ತೀಚೆಗೆ ಕನ್ನಡದಲ್ಲಿ ಪ್ರಸಾರವಾಗುತ್ತಿರುವುದು ಸಂತಸ ನೀಡಿದೆ. ಮೊದಲು ವೀಕ್ಷಿಸಿದರೂ ಸಂಪೂರ್ಣವಾಗಿ ಆಸ್ವಾದಿಸಲು ಸಾಧ್ಯವಾಗಿರಲಿಲ್ಲ. ಸ್ಥಳೀಯ ಭಾಷೆಯಲ್ಲಿ ನೀಡಿದರೆ ಎಷ್ಟು ಜನಪ್ರಿಯವಾಗಬಹುದು ಎನ್ನುವುದು ಈಗ ಮನದಟ್ಟು ಮಾಡಿದೆ. ಮನೆ ಹಾಳುಮಾಡುವ, ದ್ವೇಷ ಸಾಧಿಸುವ, ಪಿತೂರಿ ನಡೆಸುವ ಮತ್ತು ನಗರದ ಶ್ರೀಮಂತ ಜೀವನವನ್ನು ವೈಭವೀಕರಿಸುವ ಧಾರಾವಾಹಿಗಳಿಂದ ಕೊಂಚ ಬಿಡುವು ಸಿಕ್ಕಂತೆ ಆಗಿದೆ.

–ರಮಾನಂದ ಶರ್ಮಾ, ಬೆಂಗಳೂರು

## ಸಂಸ್ಕಾರ ಇಲ್ಲದ ಭಾಷೆ

ಕೋವಿಡ್ 19ರ ಮಾರಕ ಕಾಲಘಟ್ಟದಲ್ಲಿ ಕನ್ನಡ ವಾಹಿನಿಗಳ ವೈಖರಿ ಎಷ್ಟು ಅಧೋಗತಿಯನ್ನು ತಲುಪಿವೆ ಎಂಬುದನ್ನು ಊಹಿಸಲೂ ಸಾಧ್ಯವಿಲ್ಲ. ಜಗತ್ತನ್ನೆಲ್ಲ ಆವರಿಸಿರುವ ಈ ಸಾಂಕ್ರಾಮಿಕದ ಬಗ್ಗೆ ನೀಡುತ್ತಿರುವ ಮಾಹಿತಿ, ಉಪಯೋಗಿಸುತ್ತಿರುವ ಭಾಷೆ, ಸಲ್ಲದ ಊಹಾಪೋಹಗಳು, ಆಧಾರರಹಿತ ವಿವರಣೆಗಳು ಎಲ್ಲವೂ ಅತ್ಯಂತ ಅಸಹ್ಯದ ಅತಿರೇಕ. ಈ ಸಂಕಟವನ್ನು ಅನುಭವಿಸುತ್ತಿರುವ ವ್ಯಕ್ತಿಗಳ ಹಾಗೂ ಅವರ ಕುಟುಂಬಸ್ಥರ ಬಗ್ಗೆ ಕನಿಷ್ಠ ಸೌಜನ್ಯಯುತ ಭಾಷೆಯನ್ನಾದರೂ ಉಪಯೋಗಿಸುವಷ್ಟು ಪರಿಜ್ಞಾನ ವಾಹಿನಿಗಳ ಸಂಪಾದಕ ವರ್ಗಕ್ಕೆ ಇರಬಾರದೇ? ನಿಧನ ಹೊಂದಿದವರ ಬಗ್ಗೆ ಏಕವಚನ ಪ್ರಯೋಗ, ಹಿರಿಯ ನಾಗರಿಕರ ಬಗ್ಗೆ ಸಂಯಮರಹಿತ ಒರಟು ಪದಗಳು ಮತ್ತು ವಿಶ್ಲೇಷಣೆ, ಕುಟುಂಬಸ್ಥರ ದುಃಖ ಆಕ್ರಂದನಗಳ ಘನತೆ ಮೀರಿದ ವ್ಯಾಖ್ಯಾನಗಳು ದಿನದ 24 ಗಂಟೆಯೂ ಪ್ರಸಾರವಾಗುತ್ತಿರುವುದು ಅಕ್ಷಮ್ಯ. ಈ ನಿಟ್ಟಿನಲ್ಲಿ ದೂರದರ್ಶನದ ಚಂದನ ವಾಹಿನಿಯನ್ನು ಮೆಚ್ಚಬಹುದು. ಸಪ್ಪೆಯಾದರೂ ಸಂಕಟದ ವೈಭವೀಕರಣವಿಲ್ಲ. ಸಾಧ್ಯವಾದಷ್ಟೂ ಸಾಕ್ಷ್ಯಾಧಾರಗಳಿಂದ ಉತ್ಪ್ರೇಕ್ಷೆ ಇಲ್ಲದ ಸುದ್ದಿಯನ್ನು ಚಂದನ ಪ್ರಸಾರ ಮಾಡುತ್ತದೆ.

–ಎಂ.ಜಿ. ಶ್ರೀನಾಥ್

ವಾರದ ಪತ್ರ

## ಮಕ್ಕಳ ಮನೋವಿಕಾಸ ಕೇಂದ್ರ

ಚಂದನ ವಾಹಿನಿಯಲ್ಲಿ 'ಮಕ್ಕಳ ವಾಣಿ' ಪ್ರಸಾರವಾಗುತ್ತಿದೆ. ಕೊರೊನಾ ಹಿನ್ನೆಲೆಯಲ್ಲಿ ಶಾಲೆಗಳು ಪ್ರಾರಂಭ ಆಗದ ಅತಂತ್ರ ಸ್ಥಿತಿಯಲ್ಲಿ ಇರುವುದರಿಂದ ಮಕ್ಕಳಿಗೆ ದೀರ್ಘ ಕಾಲದ ರಜೆ ಸಿಕ್ಕಿದೆ. ಈ ಸಂದರ್ಭದಲ್ಲಿ ನಲಿಯೋಣ– ಕಲಿಯೋಣ ಎಂಬ ವಿನೂತನ ಕಾರ್ಯಕ್ರಮವನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ಹಮ್ಮಿಕೊಂಡಿದೆ. ಇದು ಆಟದೊಡನೆ ಪಾಠ ಮಾಡುವ ವಿಧಾನ ಮಕ್ಕಳಲ್ಲಿ ಇರುವ ಸುಪ್ತಕಲೆಗಳಿಗೆ ಉತ್ತೇಜನ ನೀಡುವ ಉದ್ದೇಶ ಹೊಂದಿದೆ. ಕತೆ ಹೇಳುವುದು, ಕರಕುಶಲ ವಸ್ತುಗಳನ್ನು ಸಿದ್ಧಪಡಿಸುವುದು, ಸಮೂಹ ಗಾಯನ, ಬಣ್ಣ ಬಣ್ಣದ ಕಾಗದಗಳಿಂದ ವಿವಿಧ ಆಟಿಕೆಗಳನ್ನು ತಯಾರಿಸುವುದು ಸರಳ ಚಿತ್ರಗಳನ್ನು ಬರೆಯುವದು ಹೀಗೆ ಹಲವು ರಚನಾತ್ಮಕ ಕ್ರಿಯೆಗಳನ್ನು ರೂಪಿಸಿ ಪ್ರಸಾರ ಮಾಡುತ್ತಿದೆ.

ಪಶು–ಪಕ್ಷಿಗಳ ಜೀವನ ಕ್ರಮವನ್ನು ವಿವರಿಸುವ ವಿಡಿಯೊಗಳನ್ನು ಪ್ರದರ್ಶಿಸಲಾಗುತ್ತಿದೆ. ಕನ್ನಡ ನಾಡಿನ ಮತ್ತು ದೇಶದ ಐತಿಹಾಸಿಕ ಸ್ಥಳಗಳನ್ನು ಪರಿಚಯಿಸಲಾಗುತ್ತಿದೆ. ಮಕ್ಕಳ ಮಾನಸಿಕ ಬೌದ್ಧಿಕ ಬೆಳವಣಿಗೆಗಳನ್ನು ಆಟಗಳ ಮೂಲಕ ವೃದ್ಧಿಸುವ ಪ್ರಯತ್ನಕ್ಕೆ ಧನ್ಯವಾದಗಳು.

–ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ಮಹಾನಾಯಕ ಭೀಮ್ ರಾವ್

ಸ್ವಾಭಿಮಾನಿ ಅಂಬೇಡ್ಕರ್ ಜೀವನ ಆಧಾರಿತ ಧಾರಾವಾಹಿ ಹಿಂದಿಯಲ್ಲಿ ಪ್ರಸಾರವಾಗುತ್ತಿತ್ತು. ಸುಮಾರು ಎಂಬತ್ತು ಕಂತು ಪ್ರಸಾರವಾಗುತ್ತಿದ್ದ ಸಂದರ್ಭದಲ್ಲಿಯೇ ಕೋವಿಡ್ 19 ಮಹಾಮಾರಿ ಮುಂದಿನ ಕಂತುಗಳ ಚಿತ್ರೀಕರಣಕ್ಕೆ ಅಡಚಣೆಯಾಗಿತ್ತು. ಈಗ ಕನ್ನಡದಲ್ಲಿ ಡಬ್ಬಿಂಗ್ ಮಾಡಿ ಝೀ ಕನ್ನಡದಲ್ಲಿ ಪ್ರತೀ ಶನಿವಾರ– ಭಾನುವಾರ ಪ್ರಸಾರವಾಗುತ್ತಿರುವುದು ಸ್ವಾಗತಾರ್ಹ. ಪಾತ್ರಗಳ ಸಂಭಾಷಣೆಯಲ್ಲಿ ತುಟಿ ಚಲನೆಗೆ ಹೆಚ್ಚಿನ ಗಮನ ಕೊಡಬೇಕು. ಒಟ್ಟಿನಲ್ಲಿ ಧಾರಾವಾಹಿ ಪ್ರತಿಯೊಬ್ಬರ ಅಭಿನಯ, ವೇಷಭೂಷಣ ತುಂಬಾ ಚೆನ್ನಾಗಿ ಮೂಡಿ ಬರುತ್ತಿದೆ.

–ಸಿಹಿಮೊಗೆ ರಮೇಶ್, ಮೈಸೂರು

## ಪ್ರತಿಭೆಗಳು ಪ್ರಜ್ವಲಿಸಲಿ

ಚಂದನದಲ್ಲಿ ನೇರ ಪ್ರಸಾರದ 'ಶುಭೋದಯ ಕರ್ನಾಟಕ' ಕೊರೊನಾ ದಾಳಿಗೂ ಮುನ್ನವೇ ಸ್ಥಗಿತವಾಗಿದೆ. ಬಹಳವೇ ಜನಪ್ರಿಯವಾಗಿದ್ದ ಈ ಕಾರ್ಯಕ್ರಮವನ್ನು ಪುನಃ ಆರಂಭಿಸಲು ಸದ್ಯ ಆಗದೇ ಇರಬಹುದು. ಏಕೆಂದರೆ ಸಂಪನ್ಮೂಲ ವ್ಯಕ್ತಿಗಳನ್ನು ಸ್ಟುಡಿಯೋಗೆ ಕರೆಸಿಕೊಳ್ಳುವುದು ಅನಾನುಕೂಲ ಆಗುತ್ತದೆ. ಅದಕ್ಕೆ ಪರ್ಯಾಯ ಮಾರ್ಗಗಳನ್ನು ಅನುಸರಿಸಲು ಸಾಧ್ಯವೇ ಇಲ್ಲವೆ ಮುದ್ರಿಸಿ ಪ್ರಸಾರ ಆರಂಭ ಮಾಡಬಹುದೇನೋ? ಈ ಕಾರ್ಯಕ್ರಮದಿಂದ ಅನೇಕಾನೇಕ ಪ್ರತಿಭಾವಂತರವನ್ನು ಸಮಾಜಕ್ಕೆ ಪರಿಚಯಿಸಿದಂತಾಗುತ್ತೆ. ಆದಷ್ಟು ಶೀಘ್ರದಲ್ಲಿ ಈ ಕಾರ್ಯಕ್ರಮದ ಪ್ರಸಾರ ಶುರು ಆಗಬಹುದೆಂಬುದು ನಿರೀಕ್ಷೆ. ದಯವಿಟ್ಟು ದೂರದರ್ಶನದ ಕಾರ್ಯಕ್ರಮ ಆಯೋಜಕರು ಈ ಸಂಗತಿಗೆ ಆದ್ಯತೆ ನೀಡಲಿ.

–ರಾಜೀವ್ ಮಾಗಲ್, ಸಕಲೇಶಪುರ

## ಪರಮಾಶ್ಚರ್ಯ ಬೇಕಿಲ್ಲ ಸಹಜತೆ ಇರಲಿ

ಸುದ್ದಿವಾಹಿನಿಗಳ ಸುದ್ದಿವಾಚಕರು, ನಿರೂಪಕರು, ವಿಶ್ಲೇಷಕರೆಲ್ಲರೂ ಪ್ರಸ್ತುತ ಲಾಕ್‌ಡೌನ್, ಅನ್‌ಲಾಕ್‌ಗಳ ಹಂತವನ್ನು ಮೊಬೈಲ್ ತರಂಗಗಳಂತೆ ಭಾವಿಸಿರಬಹುದು ಅನಿಸುತ್ತದೆ. ಲಾಕ್‌ಡೌನ್ ಫೋರ್ ಪಾಯಿಂಟ್, ಫೈವ್ ಪಾಯಿಂಟ್... ಓ ಎಂದೇ ಹೇಳುತ್ತಿರುತ್ತಾರೆ. ಅದರಲ್ಲಿ ಪಬ್ಲಿಕ್ ಟೀವಿಯ ಅನುಭವಿ ಪತ್ರಕರ್ತರೂ ಹೀಗೇ ಹೇಳುತ್ತಿರುತ್ತಾರೆಂದರೆ ಏನನ್ನಿಸಲಿಕ್ಕಿಲ್ಲ. ದಯವಿಟ್ಟು ಇನ್ನು ಮುಂದಾದರೂ ಲಾಕ್‌ಡೌನ್, ಅನ್‌ಲಾಕ್ ಹಂತಗಳನ್ನು ಓ ಎಂದೆನ್ನದೇ ಸಂಖ್ಯೆಯನ್ನಷ್ಟೇ ಹೇಳಿ ಎಂದು ವಿನಂತಿ.

–ಕೆ.ವಿ. ಮಂಜುನಾಥ್, ಕುಂಟುಗೋಡು

## ಜಡೆ ಮೋಹಿನಿ

ಸ್ಟಾರ್ ಸುವರ್ಣದ 'ದೃಷ್ಟಿ'ಯಲ್ಲಿ ಮೋಹಿನಿ ಮರ ಹತ್ತುವುದನ್ನು ನೋಡಿದರೆ ಅವಳನ್ನು ತೋಟದಲ್ಲಿ ತೆಂಗಿನ ಮರಗಳನ್ನು ಕ್ಷಣಾರ್ಧದಲ್ಲಿ ಹತ್ತಿ ಕಾಯಿಗಳನ್ನು ಇಳಿಸಬಹುದು ಎಂದೆನಿಸಿತು. ಅವಳ ಜಡೆ ಹಗ್ಗದ ರೀತಿಯಲ್ಲಿ ಇದ್ದು, ಜಡೆ ಮೂಲಕವೇ ಎಳೆ ನೀರನ್ನು ಇಳಿಸಬಹುದು ಎಂದೆನಿಸಿತು. ಒಟ್ಟಿನಲ್ಲಿ ಹೊಸ ರೀತಿಯ ಮೋಹಿನಿಯ ದರ್ಶನವಾಯಿತು. ಈ ಧಾರಾವಾಹಿಯ ಉದ್ದೇಶ ಏನು ಎಂಬುದು ನನಗೆ ತಿಳಿದಿಲ್ಲ.

–ಸಜನಿ ಭಟ್ಟ, ಶಿರಸಿ.

## ಖಂಡಿತ ಮೆಚ್ಚುವುದಿಲ್ಲ

ಝೀ ಟೀವಿಯ 'ಜೊತೆ ಜೊತೆಯಲಿ' ಆರ್ಯ ಸಾಹೇಬರು ಮೀರಾಳನ್ನು ಹುಡುಕಿಕೊಂಡು ಅವರ ಮನೆಗೆ ಹೋಗುತ್ತಾರೆ. ಅಲ್ಲಿ ಮೀರಾಳ ತಾಯಿ ಪಾರ್ಶ್ವವಾಯು ಕಾಯಿಲೆಯಿಂದ ಹಾಸಿಗೆ ಹಿಡಿದು ಮಲಗಿರುತ್ತಾರೆ. ಅದನ್ನು ನೋಡಿ ಆರ್ಯ ಸಾಹೇಬರು ಮೀರಾ ಯಾಕೆ ಈ ವಿಷಯ ಇಲ್ಲಿಯವರೆಗೂ ನನಗೆ ತಿಳಿಸಲಿಲ್ಲ ಎಂದು ವಿಪರೀತ ಮರುಗುತ್ತಾರೆ. ವೀಕ್ಷಕರಿಗೆ ಈ ವಿಷಯದ ಬಗ್ಗೆ ಮರುಕ ಆದರೂ ಆಕೆ ಬಗ್ಗೆ ಕನಿಕರ ಹುಟ್ಟಲು ಸಾಧ್ಯವೇ ಇಲ್ಲ. ಏಕೆಂದರೆ ನಾಯಕಿ ಅನು ಆರಂಭದಿಂದ ಕಚೇರಿಯಲ್ಲಿ ಮೀರಾಳಿಂದ ಒಂದಲ್ಲ ಒಂದು ಕಿರುಕುಳ ಅನುಭವಿಸುತ್ತಲೇ ಬಂದಿದ್ದಾಳೆ. ಅಲ್ಲದೆ ಮುಖ್ಯವಾದ ಫೈಲಿನಿಂದ ಮಾಹಿತಿ ಕದ್ದು ಅನುವಿನ ಮೇಲೆ ಆರೋಪ ಹೊರಿಸಿ ಆಫೀಸಿಗೆ ಬರದಂತೆ ಮಾಡಿರುತ್ತಾಳೆ. ಅಂತಹವಳ ಮೇಲೆ ಮರುಕ ತೋರಿಸುವುದನ್ನು ವೀಕ್ಷಕ ಒಪ್ಪಲು ಸಾಧ್ಯವೇ ಇಲ್ಲ.

–ಎನ್.ಎಸ್. ಚಂದ್ರಶೇಖರ್ ಬೆಂಗಳೂರು